ಡಿಸೆಂಬರ್ 2022

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ – ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಸ್ವಚ್ಛ ಸಂಕೀರ್ಣ ಜಲೋತ್ಸವ ಮನೆ ಮನೆಗೆ ಗಂಗೆ ಜಲ ಜೀವನ ಮಿಷನ್

# ಸ್ವಚ್ಛತಾವಾಣಿ
## ವಾರ್ತಾಪತ್ರ

### ಮುಖ್ಯಮಂತ್ರಿಯವರಿಂದ ಬಹುಗ್ರಾಮ ಕುಡಿಯುವ ನೀರಿನ ಯೋಜನೆ ಉದ್ಘಾಟನೆ

ಮಾನ್ಯ ಮುಖ್ಯಮಂತ್ರಿ **ಶ್ರೀ ಬಸವರಾಜ ಬೊಮ್ಮಾಯಿ** ಅವರು ಕೊಳ್ಳೇಗಾಲ ಹಾಗೂ ಹನೂರು ವಿಧಾನಸಭಾ ಕ್ಷೇತ್ರದ 193 ಗ್ರಾಮಗಳಿಗೆ ನೀರು ಒದಗಿಸಲು **ಬಹುಗ್ರಾಮ ಕುಡಿಯುವ ನೀರಿನ ಯೋಜನೆ**ಯಡಿ ಮೊದಲ ಹಂತದಲ್ಲಿ ನಿರ್ಮಿಸಲಾಗಿರುವ ಕಾಮಗಾರಿಗಳನ್ನು ಲೋಕಾರ್ಪಣೆಗೊಳಿಸಿದರು. ಇದೇ ವೇಳೆ ಅವರು ಚಾಮರಾಜನಗರ ಜಿಲ್ಲೆಯ **43 ಗ್ರಾಮ ಪಂಚಾಯಿತಿಗಳಿಗೆ ಸ್ವಚ್ಛವಾಹಿನಿಗಳನ್ನು ಹಸ್ತಾಂತರಿಸಿದರು.** ಈ ಸಂದರ್ಭದಲ್ಲಿ ಸಚಿವರು, ಶಾಸಕರು, ಜಿಲ್ಲಾಧಿಕಾರಿಗಳು ಉಪಸ್ಥಿತರಿದ್ದರು.








### ಅಪರ ಮುಖ್ಯಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ SBMG ಹಾಗೂ JJM ಯೋಜನೆಗಳ ಪ್ರಗತಿ ಪರಿಶೀಲನಾ ಸಭೆ



**ಬೆಳಗಾವಿಯ** ಸುವರ್ಣ ವಿಧಾನಸೌಧದ ಸಭಾಂಗಣದಲ್ಲಿ SBMG ಹಾಗೂ JJM ಯೋಜನೆಗಳ ಪ್ರಗತಿ ಪರಿಶೀಲನಾ ಸಭೆಯು ಗ್ರಾಮೀಣಾಭಿವೃದ್ಧಿ ಮತ್ತು ಪಂಚಯತ್ ರಾಜ್ ಇಲಾಖೆಯ ಅಪರ ಮುಖ್ಯಕಾರ್ಯದರ್ಶಿಯವರಾದ **ಶ್ರೀ ಎಲ್.ಕೆ.ಆತೀಕ್** ಅವರ ಅಧ್ಯಕ್ಷತೆಯಲ್ಲಿ ನಡೆಯಿತು. ಈ ವೇಳೆ **ಶ್ರೀ ಗಂಗಾಧರ ಸ್ವಾಮಿ** RDWSD ನಿರ್ದೇಶಕರು, ಬೆಳಗಾವಿ ಜಿ.ಪಂ ಸಿ.ಇ.ಓ, ಅಭಿವೃದ್ಧಿ ಉಪಕಾರ್ಯದರ್ಶಿ ಶ್ರೀ ಎಸ್.ಸಿ ಮಹೇಶ್, ISA ನಿರ್ದೇಶಕರು ಸೇರಿದಂತೆ ಇಲಾಖೆಯ ಹಿರಿಯ ಅಧಿಕಾರಿಗಳು ಹಾಜರಿದ್ದರು.






### ಜಲ ಜೀವನ್ ಮಿಷನ್ ಯೋಜನೆಯ ಪ್ರಗತಿ ಪರಿಶೀಲನಾ ಸಭೆ ನಡೆಸಿದ ಅಪರ ಮುಖ್ಯಕಾರ್ಯದರ್ಶಿ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಅಪರ ಮುಖ್ಯಕಾರ್ಯದರ್ಶಿಯವರಾದ ಶ್ರೀ ಎಲ್.ಕೆ ಅತೀಕ್ ಅವರ ಅಧ್ಯಕ್ಷತೆಯಲ್ಲಿ ಬೆಳಗಾವಿ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಬೆಳಗಾವಿ ವಿಭಾಗದ ಜಲ ಜೀವನ್ ಮಿಷನ್ ಯೋಜನೆಯ ಪ್ರಗತಿ ಪರಿಶೀಲನಾ ಸಭೆ ನಡೆಯಿತು. ಈ ವೇಳೆ ಶ್ರೀ ಗಂಗಾಧರ ಸ್ವಾಮಿ RDWSD ನಿರ್ದೇಶಕರು, ಜಿ.ಪಂ ಸಿ.ಇ.ಓ ಸೇರಿದಂತೆ ಇಲಾಖೆಯ ಹಿರಿಯ ಅಧಿಕಾರಿಗಳು ಭಾಗಿಯಾದರು.





### RDWSD ನಿರ್ದೇಶಕರಿಂದ ಪ್ರಗತಿ ಪರಿಶೀಲನಾ ಸಭೆ

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ನಿರ್ದೇಶಕರಾದ **ಶ್ರೀ ಗಂಗಾಧರ ಸ್ವಾಮಿ** ಅವರು ಉತ್ತರ ಕನ್ನಡ ಜಿಲ್ಲೆಗೆ ಭೇಟಿ ನೀಡಿ ಜಿಲ್ಲಾ ಪಂಚಾಯಿತಿ ಭವನದಲ್ಲಿ **ಜೆ.ಜೆ.ಎಂ ಹಾಗೂ ಎಸ್.ಬಿ.ಎಂ.ಜಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆ** ನಡೆಸಿದರು. ಈ ವೇಳೆ **ಜಿ.ಪಂ ಸಿ.ಇ.ಓ,** EE ಸೇರಿದಂತೆ ಇಲಾಖೆಯ ಹಿರಿಯ ಅಧಿಕಾರಿಗಳು ಭಾಗಿಯಾದರು.







### ಎಮ್.ಆರ್.ಎಫ್ ಘಟಕದ ಪ್ರಗತಿ ಪರಿಶೀಲನೆ ನಡೆಸಿದ ಇಲಾಖಾ ನಿರ್ದೇಶಕರು

**ಶ್ರೀ ಗಂಗಾಧರ ಸ್ವಾಮಿ,** ನಿರ್ದೇಶಕರು RDWSD ಅವರು **ರಾಮನಗರ ಜಿಲ್ಲೆಯ** ವಂದರ್ಗುಪ್ಪೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ **ಎಂ.ಆರ್.ಎಫ್ ಘಟಕಕ್ಕೆ** ಭೇಟಿ ನೀಡಿ ಘಟಕದ **ಪ್ರಗತಿ ಪರಿಶೀಲನೆ** ನಡೆಸಿದರು. ಈ ವೇಳೆ ಜಿ.ಪಂ. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಮುಖ್ಯ ಯೋಜನಾಧಿಕಾರಿ ಸೇರಿದಂತೆ ಇಲಾಖೆಯ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.







### SBMG ಯೋಜನೆಯ ಪರಿಣಾಮಕಾರಿ ಅನುಷ್ಠಾನದ ಕುರಿತು ಸಭೆ

**ಶ್ರೀ ಗಂಗಾಧರ ಸ್ವಾಮಿ,** ನಿರ್ದೇಶಕರು RDWSD ಅವರ ಅಧ್ಯಕ್ಷತೆಯಲ್ಲಿ ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ SBMG ಯೋಜನೆಯ ಪರಿಣಾಮಕಾರಿ ಅನುಷ್ಠಾನದ ಕುರಿತು ಸಭೆ ನಡೆಯಿತು. ಅಭಿವೃದ್ಧಿ ಉಪಕಾರ್ಯದರ್ಶಿ **ಶ್ರೀ ಎಸ್.ಸಿ.ಮಹೇಶ್**, ತಾ.ಪಂ EOಗಳು,EE, AEE, SBMG ನೋಡಲ್ ಅಧಿಕಾರಿಗಳು ಮತ್ತು ಸಮಾಲೋಚಕರು ಸಭೆಯಲ್ಲಿ ಉಪಸ್ಥಿತರಿದ್ದರು.







### ಸಾಮರ್ಥ್ಯ ಅಭಿವೃದ್ಧಿ ಕಾರ್ಯಾಗಾರಕ್ಕೆ RDWSD ISA ನಿರ್ದೇಶಕರಿಂದ ಚಾಲನೆ

**ಚಿಕ್ಕಬಳ್ಳಾಪುರದಲ್ಲಿ** ಜೆ.ಜೆ.ಎಮ್ ಹಾಗೂ ಎಸ್.ಬಿ.ಎಮ್.ಜಿ ಯೋಜನೆಗಳ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಹಮ್ಮಿಕೊಳ್ಳಲಾಗಿದ್ದ **ಸಾಮರ್ಥ್ಯ ಅಭಿವೃದ್ಧಿ ಕಾರ್ಯಾಗಾರಕ್ಕೆ ಜಿ.ಪಂ ಸಿ.ಇ.ಓ ಹಾಗೂ RDWSD ISA ನಿರ್ದೇಶಕರಾದ ಶ್ರೀಮತಿ ಶೀತಲ್ ಸಿಂಗ್ ಚಾಲನೆ** ನೀಡಿದರು. ಕಾರ್ಯಾಗಾರದಲ್ಲಿ ಜಿಲ್ಲಾ ಯೋಜನಾ ವ್ಯವಸ್ಥಾಪಕರು, AEE, PDOಗಳು, ಸೇರಿದಂತೆ ಇಲಾಖೆಯ ಅಧಿಕಾರಿಗಳು ಹಾಜರಿದ್ದರು.







**ನೀರು ಮತ್ತು ನೈರ್ಮಲ್ಯಕ್ಕೆ ಸಂಬಂಧಪಟ್ಟ ಸಮಸ್ಯೆಗಳಿದ್ದಲ್ಲಿ ಕರೆ ಮಾಡಿ : 9480985555**

ನಮ್ಮನ್ನು ಹಿಂಬಾಲಿಸಿ: swachhamevajayate.org rdpr.kar.nic.in